**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 522/2025**

**ಫಿರ್ಯಾದುದಾರರು:**

ಸರಕಾರದ ಪರವಾಗಿ, ಮುಂಡಗೋಡ
ಪೋಲಿಸ್ ಠಾಣೆ, ಮುಂಡಗೋಡ.

**– ವಿರುದ್ಧ –**

**ಆರೋಪಿತರು:**

1. ಶಾನವಾಜ ತಂದೆ ಅಬ್ದುಲ್ ಮುನಾಫ್ ಜಟಪೋಲ್,
   ಪ್ರಾಯ: 30 ವರ್ಷ, ವೃತ್ತಿ: ವೆಲ್ಡಿಂಗ್ ಕೆಲಸ,
   ಸಾ: ನೂರಾಗನಿಗಲ್ಲಿ, ಮುಂಡಗೋಡ.

2. ಮಹ್ಮದಸಾದಿಕ್ ತಂದೆ ಮಹಬೂಬಲಿ ಚಾವುಸ,
   ಪ್ರಾಯ: 30 ವರ್ಷ, ವೃತ್ತಿ: ಚಾಲಕ ಕೆಲಸ,
   ಸಾ: ಕಿಲ್ಲೆ ಓಣಿ, ಮುಂಡಗೋಡ.

**ಆರೋಪಣೆ**

ದಿನಾಂಕ 30-06-2025 ರಂದು 18-20 ಗಂಟೆ ಸುಮಾರಿಗೆ ಮುಂಡಗೋಡ ಪೋಲಿಸ್ ಠಾಣಾ ಸರಹದ್ದಿನಲ್ಲಿ ಬರುವ ಮುಂಡಗೋಡ ತಾಲೂಕಿನ ತೆಗ್ಗಿನಕೊಪ್ಪ ಗ್ರಾಮದ ಕಡೆಗೆ ಹೋಗುವ ಸಿಮೆಂಟ್ ರಸ್ತೆಯ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರಾದ ನೀವು ಕಾನೂನು ಬಾಹಿರವಾಗಿ ಅಕ್ರಮಕೂಟ ಕಟ್ಟಿಕೊಂಡು ನಿಮ್ಮ ನಿಮ್ಮ ಲಾಭಾದ ಸಲುವಾಗಿ ಇಸ್ಪಿಟ ಎಲೆಗಳ ಮೇಲೆ ಹಣವನ್ನು ಪಂಥವಾಗಿ ಕಟ್ಟಿ ಅಂದರ ಬಾಹರ ಇಸ್ಪಿಟ ಜೂಜಾಟವನ್ನು ಆಡುತ್ತಾ, ನಗದು ಹಣ ರೂ.2,93,080/- ಹಾಗೂ ಜೂಜಾಟಕ್ಕೆ ಸಂಬಂಧಿಸಿದ ಸಾಮಗ್ರಿಗಳೊಂದಿಗೆ ಸಿಕ್ಕು, ಆ ಮೂಲಕ ನೀವು ಕಲಂ 87 ಕನಾರ್ಟಕ ಪೋಲಿಸ್ ಕಾಯ್ದೆ ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಪರಿಮಿತಿಯಲ್ಲಿ ಮಾಡಿರುತ್ತೀರಾ.

ಈ ಮೇಲಿನ ಆಪಾದನೆಗಳಿಗಾಗಿ ಆರೋಪಿತರಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

ಪ್ರಶ್ನೆ – ಮೇಲೆ ಓದಿ ಹೇಳಿದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ –

ಆರೋಪಿ 1: ಆರೋಪಿ 2:

ಪ್ರಶ್ನೆ - ಈ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ -

ಆರೋಪಿ 1: ಆರೋಪಿ 2:

(ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಈ ಆರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ನಂತರ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿಃ 18-12-2025.

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು
ಮುಂಡಗೋಡ